# ತೂಕದಲ್ಲಿ ಗುರು ಮೀರಿಸಿದ ಶಿಷ್ಯೆ!

‘ಹರಿಶ್ಚಂದ್ರ ಕಾವ್ಯ’ ಕೃತಿಯನ್ನು ಲೋಕ ಕೊಂಡಾಡುತ್ತ ಆನೆಯ ಮೇಲೆ ಮೆರೆಸುತ್ತಿದ್ದಾಗ ಕವಿ ರಾಘವಾಂಕ ಸಂತೋಷದಿಂದ ಉಬ್ಬಿದನಂತೆ. ಶಿಷ್ಯನ ಕಾವ್ಯಸೃಷ್ಟಿ ಗುರು ಹರಿಹರನಿಗೆ ಸರಿಬರಲಿಲ್ಲ. ಭೂಪಾಲರ ಬಗ್ಗೆ, ಯಕಃಶ್ಚಿತ್ ಮನುಷ್ಯರ ಬಗ್ಗೆ ಬರೆದ ನಿನ್ನ ಬುದ್ಧಿಗೆ ಏನಾಗಿದೆ; ಸ್ತುತಿಸುವುದಾದರೆ ದೇವರನ್ನು ಸ್ತುತಿಸು ಎಂದು ಬುದ್ಧಿಹೇಳಿದನಂತೆ. ಗುರುವಿನ ಮಾತಿಗೆ ಓಗೊಟ್ಟು ನಂತರದಲ್ಲಿ ರಾಘವಾಂಕ ರಚಿಸಿದ್ದು ಗಿರಿಜಾ ಕಲ್ಯಾಣವನ್ನು.

ರಾಘವಾಂಕ–ಹರಿಹರರದು ಪರಂಪರೆಯ ಕಥೆ. ಈ ಹೊತ್ತಿನ ಗುರುಶಿಷ್ಯರ ಕಥೆ ಕೇಳಿ: ಯುಗಕ್ಕೊಂದು ಮಹಾಕಾವ್ಯದ ಕಾಲ ಮುಗಿದುಹೋಯಿತು. ವರ್ಷಕ್ಕೊಂದು ಮಹಾಕಾವ್ಯದ ದಿನಗಳಿವು. ಬುದ್ಧ, ಬಸವ, ಜಿನ, ಏಸು– ಬಣ್ಣನೆಗೆ ಯೇಸೊಂದು ಬೆಳಕುಗಳು. ಈ ಬಣ್ಣನೆಯ ಬಣ್ಣಗಳಿಗೆ ಮರುಳಾದ ಕವಯತ್ರಿಯೊಬ್ಬರು ‘ಬುದ್ಧ ಮಹಾದರ್ಶನ’ಕ್ಕೆ ಮಹಾಕಾವ್ಯದ ಟ್ಯಾಗು ತಗುಲಿಸಿರುವುದು, ಆ ‘ದರ್ಶನ’ ಆನೆಯ ಮೇಲೆ ಮೆರೆದದ್ದು ಹಳೆಯ ಸಂಗತಿಗಳಷ್ಟೆ. ಈ ಹಳೆಯ ಸಾಹಸಗಳಿಗೆ ಕಾಲಕಾಲಕ್ಕೆ ಗುರುಕಟಾಕ್ಷವೂ ದೊರೆಯುತ್ತಾ ಬಂದಿದೆ. ಅಂಥ ಶಿಷ್ಯವಾತ್ಸಲ್ಯ ಮೊನ್ನೆ ದಸರೆಯ ಪ್ರಭಾವಳಿಯಲ್ಲಿ ಮತ್ತೊಮ್ಮೆ ನವೀಕರಣಗೊಂಡಿತು.

... ಇಂತಿಪ್ಪ ಕವಯತ್ರಿಯ ಮಹಾಕಾವ್ಯದ ಮಹಿಮೆ ಬಣ್ಣಿಸಲಸದಳವು. ಅದರ ತೂಕ ತಡೆದುಕೊಳ್ಳಬಲ್ಲ ತಕ್ಕಡಿಗಳೇ ಇಲ್ಲವು. ಗೆರೆಕೊರೆದಂತೆ ಹೇಳುವುದಾದರೆ ಆ ತೂಕ ನನ್ನ ತೂಕಕ್ಕಿಂತಲೂ ಅಧಿಕವು... ಈ ರೀತಿಯಾಗಿ ಗುರುವಾಕ್ಕು ಸರ್ಕಾರಿ ಕವಿಗೋಷ್ಠಿಯ ಅಧ್ಯಕ್ಷಪೀಠದಿಂದ ಅಲೆಅಲೆಯಾಗಿ ಹೊಮ್ಮುತ್ತಿದ್ದರೆ, ಲತೆಯಂಥ ಶಿಷ್ಯೆಯ ಮೊಗದಲ್ಲಿ ಹುಣ್ಣಿಮೆಯೂ ಬೆಳದಿಂಗಳೂ...

ಚಾವಡಿಯಿದ್ದ ಮೇಲೆ ಅಡ್ಡಮಾತುಗಳು ಇಲ್ಲದಿದ್ದೀತೆ? ಗುರುಗಳ ಮಾತನ್ನು ತಪ್ಪಾಗಿ ಅರ್ಥೈಸಿದವರಿಗೆ ಕೊರತೆಯಿರಲಿಲ್ಲ. ಗುರುಗಳು ಹೇಳಿದ ತೂಕ ಕಾವ್ಯದ್ದೋ ವ್ಯಕ್ತಿಯದೋ ಎಂದು ಒಬ್ಬರು ಕುಹಕವಾಡಿದರೆ, ಮತ್ತೊಬ್ಬರು ‘ಇದೆಂಥ ಮರುಳು’ ಎಂದು ನಕ್ಕರು. ಗುರುದಕ್ಷಿಣೆ ಕಾಲ ಮುಗಿದು ‘ಶಿಷ್ಯದಕ್ಷಿಣೆ’ಯ ಕಾಲವಿದು ಎಂದು ಮತ್ತೊಬ್ಬರಂದರು.

ಟೀಕೆಗಳು ಕಿವಿಗೆ ಬಿದ್ದರೂ– ‘ಯಾರು ಏನಾದರೂ ಹೇಳಿಕೊಳ್ಳಿ, ನನ್ನ ಮಾತಿಗೆ ನಾನು ಬದ್ಧ’ ಎಂದು ದಾಸಪ್ರಕಾಶದ ತಂಪಲ್ಲಿ ಕೆಂಪಾದರಂತೆ ಗುರುಗಳು. ಈ ಗುರುಗಳು ರಾಘವಾಂಕ–ಹರಿಹರನ ಕಥೆಯನ್ನೂ ಸೊಗಸಾಗಿ ಹೇಳಬಲ್ಲರಂತೆ!

–ಮಹತಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd.,Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**
Editorial Office: 75, M.G Road, Bangalore-560 001 E-mail:editormy@deccanherald.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68